ಅದರಿಂದ ಸಮಾಜದ ನೆತ್ತರಕ್ಕೆ ಹಸಿ, ಕಾವು, ಬಲಗಳು ಉಂಟಾಗುತ್ತಿದ್ದವು.


ಅಣ್ಣ: ಬುದ್ಧಿವಂತರು ಪಶುಗಳನ್ನೂ, ಯಂತ್ರಗಳನ್ನೂ ನಿಗ್ರಹಿಸಬಲ್ಲರು. ಬುದ್ಧಿವಂತಿಕೆಯು ಎದುರಿಸಿದಾಗ ಅವರು ಯುಕ್ತಿಸಮ್ಮತವಾಗಿ ಹೋರಾಡಬಲ್ಲರು. ಅದರಲ್ಲಿ ಸೋಲಬಹುದು. ಇಲ್ಲವೇ ಗೆಲ್ಲಬಹುದು. ಆದರೆ, ಬುದ್ಧಿವಂತಿಕೆಯನ್ನು ನಿಗ್ರಹಿಸುವ ನಿಲುಮೆ ಬೇಕಾಗಿದೆ ಇಂದು. ಅದೇ ಅಂತರ್ಜ್ಞಾನ. ಜಗತ್ತಿಗೆ ಅದರ ಕೊರತೆಯೇ ಕೊರತೆ. ಅದರ ಸುಳುಹು ಕಂಡುಹಿಡಿದು ನೀವು ಧನ್ಯರಾದಿರಿ; ಜಗತ್ತನ್ನು ಧನ್ಯರನ್ನಾಗಿ ಮಾಡಿದಿರಿ.

ಬಾಪು: ಇನ್ನೊಂದು ಮಹತ್ವದ ಪ್ರಶ್ನೆಯ ನೆಲೆಯೇ ಹತ್ತಲಿಲ್ಲ ನನಗೆ. ಅದೇ ಹಿಂದು-ಮುಸ್ಲಿಂ ತೊಡಕು. ಹಣೆಗೆ ಹಣೆ ಹಚ್ಚಿ ಕಾದಬೇಕೆಂದು ಕೆಲವರು; ಹಣೆಯದಿದ್ದರೆ ಮಣೆಯದೆಂದರು ಕೆಲವರು. ನಾನು ಪ್ರೇಮ ಬಿತ್ತಿ ಪ್ರೇಮ ಬೆಳೆಯಬೇಕೆಂದು ವಾದಿಸಿದೆ; ಸಾಧನೆಗೆ ತೊಡಗಿದೆ. ಗೆಲುವು ಕಟ್ಟಿಟ್ಟಿದೆ ಎಂದು ನಂಬಿಯೂ ಇದ್ದೆನು, ಆದರೆ ಅದೇಕೋ ನಿಯತಿಯು ನನಗೆ ಸಂಧಿಕೊಡಲಿಲ್ಲ.

ಅಣ್ಣ: ಹಿಂಸೆಗೆಲ್ಲಿಯೂ ಗೆಲುವು ಸಿಗದೆ ಅಹಿಂಸೆಯನ್ನು ಕೆಣಕಿದಂತೆ ಭಾರತದ ಬಾಪುವಿನ ಕೊರಳಿಗೆ ಬಿದ್ದರೆ ಸನ್ಯಾಸಿಯ ತೆಕ್ಕೆಗೆ ಬಿದ್ದಂತಾಯಿತು. ಬಾಪು ಹಿಂಸೆಯ ಕೈಗೆ ಸಿಗುವನೇ? ಪುಣ್ಯಕ್ಕೆ ಮುಸ್ಲಿಂನಿಂದ ಬಾಪುವಿನ ಕೊಲೆಯಾಗಲಿಲ್ಲ! ಅದೇ ಮುಸ್ಲಿಂರ ಭಾಗ್ಯ!

ಬಾಪು: ಭಾರತೀಯರ ಭಾಗ್ಯವೂ ಅಹುದು. ಹಿಂದುವಿನಿಂದಾದ ಕೊಲೆ! ದುಃಖಾಂತ ನಾಟಕದಿಂದ ಭಾರತೀಯರ ಜಡತೆ ಚಂಚಲಿಸಿ, ಸಂಚಲಿಸಿ, ಚೇತನಗೊಳ್ಳುವುದಕ್ಕೆ ಕಾರಣವಾಯ್ತು. ಸ್ವಾತಂತ್ರ್ಯ ಸಂಪಾದನೆಯ ಸಾಧನೆಯು ಅಂತರಾತ್ಮನ ಪ್ರೇರಣೆಯಿಂದ ಸಾಗಿದ್ದರೂ, ಸ್ವಾತಂತ್ರ್ಯ ಸಂರಕ್ಷಣೆಯ ಕಾಲಕ್ಕೆ ಅಂತರ್ವಾಣಿ ಮೌನ ತಳೆಯುವುದಕ್ಕೆ ಬುದ್ಧಿವಂತಿಕೆಯು ನಡೆಸಿದ ಗಲಿಬಿಲಿಯೇ ಕಾರಣವೆನ್ನಬೇಕು.

ಅಣ್ಣ: ಸ್ವಾತಂತ್ರ್ಯ ಸಂಪಾದನೆಯ ಕೊನೆಯ ಹಂತದಲ್ಲಿಯೇ ಬುದ್ಧಿವಂತಿಕೆಯ ಸಂತೆ ನೆರೆಯಲು



ಆರಂಭವಾಯಿತು. ಸಂತೆಯಲ್ಲಿ ಶಾಸ್ತ್ರ ಹೇಳಿ ಮೂರ್ಖರೆನಿಸಿಕೊಳ್ಳುವವರಾರು? ಸ್ವಾತಂತ್ರ್ಯ ಪ್ರಾಪ್ತಿಯ ದಾರಿಯಲ್ಲಿ ಬೆಳಕು ಬೀರಿದೆ ದೀವಿಗೆ, ಸ್ವಾತಂತ್ರ್ಯ ರಕ್ಷಣೆಯ ದಾರಿಯಲ್ಲಿಯೂ ಸಾಕಷ್ಟು ಬೆಳಕು ಬೀರಲು ಅಚಲವಾಗಿಯೇ ಇತ್ತು. ಆದರೆ, ಅದನ್ನು ಕಣ್ಣೆತ್ತಿ ನೋಡುವವರಾರು? ಕಣ್ಣುಮುಚ್ಚಿ ಕುರುಡರಾದವರಿಗೆ ಅದು ಕಾಣಿಸುವುದೂ ಅಸಾಧ್ಯ.

ಬಾಪು: ಸ್ವಾತಂತ್ರ್ಯದ ದಾರಿಯಲ್ಲಿ ನಾವು ನಿಮಿತ್ತರಾಗಿದ್ದಂತೆ, ಅದರ ರಕ್ಷಣೆಯಲ್ಲಿಯೂ ನಿಮಿತ್ತರಾಗಿ ಯಾರಾದರೂ ನಿಲ್ಲಬಹುದು. ಆತ್ಮ ಜಾಗ್ರತೆಗೊಂಡ ಭಾರತಾಂಬೆಯು ತನ್ನ ಅಂಗೋಪಾಂಗಗಳನ್ನೆಲ್ಲ ಸರಿಪಡಿಸಿಕೊಳ್ಳುತ್ತಿದ್ದಾಳೆಂದು ನನಗೆ ತಿಳಿದಂದಿನಿಂದ ನಾನು ನಿಶ್ಚಿಂತನಾಗಿದ್ದೇನೆ.

ಅಣ್ಣ: ನಿಶ್ಚಿಂತೆಯೇ ಚಿರಂತನ ಚಿಂತನೆ! ಆ ಚಿಂತನೆ ಚಿಂತಾಮಣಿಯಿದ್ದ ಹಾಗೆ. ಸರ್ವಕಲ್ಯಾಣಗಳನ್ನು ಅದು ಸಂಗಳಿಸಬಲ್ಲದು.

**ಕನ್ನಡ ಸಾಹಿತ್ಯ ಪರಿಷತ್ತು ಪ್ರಕಟಣೆಯ 'ಸಾಗರ ಸಿಂಪಿ' ಕೃತಿಯಿಂದ ಆಯ್ದ ಬರಹ.**